ದೊಡ್ಡಮ್ಮ ಕರೆದ್ರು ಹತ್ತಿರ ಹೋಗಿ ಕೂತೆ.

'ಅವನಿಗೆ ಕೋಪ. ಆಸ್ತಿ ಏನೂ ಬಿಟ್ಟಿಲ್ಲ'

'ಮತ್ತೆ ಕರ್ಮನ ಶ್ರದ್ಧೆಯಿಂದ ಮಾಡ್ತಿದ್ದಾನೆ'

'ಅವರೇ ಅದನ್ನೂ ಬರೆದಿಟ್ಟಿದ್ದಾರೆ. ಸೌದೇಲೇ ಸುಡಬೇಕು. ಅದರಲ್ಲಿ ಅರ್ಧ ಗಂಧ ಹಾಕಬೇಕು. ಬ್ರಾಹ್ಮಣರು ಎಷ್ಟು ಜನ ಇರಬೇಕು. ಇಂಥಿಂಥಾದ್ದೇ ದಾನವಾಗಬೇಕು. ಸಾಲಿಗ್ರಾಮ, ಪೂಜಾ ಪಾತ್ರೆ, ಎರಡೆಕ್ರೆ ಜಮೀನು, ಹಾಸಿಗೆ, ಮಂಚ, ಹಸು, ಕರು, ಹೋರಿ ಎಲ್ಲಾ ದಾನ ಆಗಬೇಕು. ಅದಕ್ಕೆಂದೇ ಹಣ ಬೇರೆ ಇಟ್ಟು ಹೋಗಿದ್ದಾರೆ.'

'ಇವನು ಅದು ಮಾಡ್ದೆ, ಹಣ ತಿಂದು ಬಿಟ್ರೆ?'

'ಇಲ್ಲ ವಿಲ್ಲಲ್ಲಿದೆ. ಇದು ಮಾಡದಿದ್ರೆ ಅವನಿಗೆ ಈ ಮನೆ ಅನುಭವಿಸೋ ಹಕ್ಕೂ ಇಲ್ಲ. ನನ್ನ ನಂತರ ಸೀದ ಅವನ ಮಗನಿಗೆ ಹೋಗತ್ತೆ. ಇವನು ರಸ್ತೆಗೆ ಬರ್ತಾನೆ ಅಷ್ಟೇ'.

ಆ ಅಪ್ಪನ ಈ ಮಗ, ಆಸ್ತಿ ಅನುಭವಿಸೋ ಆಸೇಲಿ ಶ್ರದ್ಧೆಯಿಂದ ಶ್ರಾದ್ಧ ಕ್ರಿಯೇಲಿ ತೊಡಗಿದ್ದ. ಹೆತ್ತ ದೊಡ್ಡಮ್ಮನ ಮುಖದಲ್ಲಿ ಸನ್ನಿವೇಶದ ವಿಡಂಬನೆಗೆ ಪ್ರತಿಕ್ರಿಯೆಯಾಗಿ ಸಣ್ಣ ನಗುವಿತ್ತು. ಗಂಡ ಮಹಾನುಭಾವನ ಬುದ್ಧಿಮತ್ತೆಯ ಬಗ್ಗೆ ಆದರ, ಗೌರವದ ಭಾವವಿತ್ತು. ಪುಣ್ಯಾತ್ಮ ಅಂದ್ರು. ಯಾರ ಬಗ್ಗೆನೋ ಗೊತ್ತಾಗಲಿಲ್ಲ.

* * *

ಹದಿನಾರಕ್ಕೆ ಊರು ಬಿಟ್ಟು ಓಡಿ ಹೋದ ದೊಡ್ಡಪ್ಪ ಮತ್ತೆ ವಾಪಸ್ ಬಂದದ್ದು ಹತ್ತು ವರ್ಷಗಳ ನಂತರ. ಅಷ್ಟೊತ್ತಿಗೆ ಸಂಸಾರ ಹಳ್ಳಿ ಬಿಟ್ಟು. ಕೆಟ್ಟು ಪಟ್ಟಣ ಸೇರಿತ್ತು. ಊರಲ್ಲಿದ್ದ ಆಸ್ತೀನೆಲ್ಲ ನಾಕಾಣೆ ಎಂಟಾಣೆಗೆ ಮಾರಿ ಶಾನುಭೋಗಿಕೆ ಹಣ, ದೇವರ ವಸ್ತ್ರ ಒಡವೆ ಕಡೇಗೆ ಕಟ್ಟಾಗಿತ್ತು. ಎಲ್ಲ ಇಲ್ಲಿ ಸಣ್ಣ ಸಣ್ಣ ಕೆಲಸ ಹಿಡಿದು ಬಾಡಿಗೆ ಮನೆ ಮಾಡಿ ಒಟ್ಟು ಸಂಸಾರ ಇದ್ರು. ಕೆಲವರಿಗೆ ಮದುವೆಗಳು ಆಗಿದ್ವಂತೆ ಮಕ್ಳು ಆಗಿದ್ವು. ಅಜ್ಜಿ ಮನೆ ಮುಂದೆ ಕೂತಿದ್ರಂತೆ. ಅಂಬಾಸಿಡರ್ ಕಾರು ಬಂತಂತೆ. ಸಿಲ್ಕು ಜುಬ್ಬ, ಸಿಲ್ಕು ಪಂಚೇಲಿ ಓಡಿ ಹೋದ ದೊಡ್ಡಪ್ಪ ಇಳಿದರಂತೆ. ಅಜ್ಜಿ ಮುಂದೆ ಟ್ರಂಕ್ ಸಮೇತ ನಿಂತೋರು ಮೈಮೇಲೆ ಇದ್ದ ಕೆಂಪು ಶಾಲೂನ ಅಜ್ಜೀಗೆ ಹೊದ್ದಿಸಿ 'ಅಮ್ಮಾ! ನಿನಗೇಂತ ಕಾಶ್ಮೀರದಿಂದ ತಂದೆ' ಅಂದ್ರಂತೆ. ಅಜ್ಜಿ ಅತ್ರು. ದೊಡ್ಡಪ್ಪ ಅತ್ರು. ಮನೆ ಮಂದಿ ಎಲ್ಲ ಸುತ್ತ ಸೇರಿ ಅತ್ರು. ರಾತ್ರಿ ಎಲ್ಲಾ ಒಟ್ಟಿಗೆ ಊಟಕ್ಕೆ ಕೂತ್ರು. ಎಲ್ಲಿ ಹೋಗಿದ್ದೆ ಅಂತ ಯಾರೂ ಕೇಳ್ಲೂ ಇಲ್ಲ, ಇವ್ರು ಹೇಳ್ಲೂ ಇಲ್ಲ. ಆದರೆ ಕೈಯಲ್ಲಿ ಸ್ವಲ್ಪ ಕಾಸಾಗಿದೆ ಅನ್ನೋದಷ್ಟು ಗೊತ್ತಾಗಿತ್ತು.

ಆ ಕಾಲದಲ್ಲಿ ಸ್ವಾಭಾವಿಕವಾಗಿ ಆಗ್ತಿದ್ದದ್ದು ಮದುವೆ ಮಕ್ಕಳು ಮಾತ್ರ. ಅಜ್ಜಿ ಹೆಣ್ಣು ಹುಡುಕಿ ಈ ದೊಡ್ಡಪ್ಪನಿಗೂ ಮದುವೆ ಅಂತ ಮಾಡಿದರು. ಒಟ್ಟು ಸಂಸಾರ. ಕೆಲವರು ಕೆಲಸಕ್ಕೆ ಹೋಗ್ತಿದ್ರು, ಸಂಬಳ ತರ್ತಿದ್ರು. ಮನೆ ಹೆಂಗಸರು ಅಡಿಗೇದು ನೋಡ್ತಿದ್ರು. ಅಜ್ಜಿ ಅಲ್ಲಿ ಕೂತು ಇಲ್ಲಿ ಕೂತು ಆಗಾಗ ಇನ್ಸ್ಪೆಕ್ಷನ್ ಮಾಡ್ತಾ ಕಾಲಾ ಕಳೀತಿದ್ರು. ಹೆಚ್ಚು ಕಮ್ಮಿ ಒಂದು ವರ್ಷ ಸಮಸ್ಯೆ ಇರಲಿಲ್ಲ. ದೊಡ್ಡಮ್ಮ ಮೊದಲ ಹೆರಿಗೇಗೆ ಅಂತ ಹೋದವ್ರು ಬೇರೇ ಮನೆ ಮಾಡ್ದೇ ವಾಪಸ್ ಬರೊಲ್ಲ ಅಂದ್ರಂತೆ. ಅಜ್ಜಿ ಹೋಗಿ ಮಾತಾಡಿ ಬಂದ್ರು. ಗಿಟ್ಲಿಲ್ಲ. ಅಲ್ಲಿ ಆಕೆ ಇವರನ್ನ ಮನೆ ಒಳ್ಗೇ ಸೇರಿಸ್ಲಿಲ್ಲವಂತೆ. ಎಲ್ಲ ಗಂಡು ಮಕ್ಕಳನ್ನೂ ಕೂರಿಸಿ ಪಂಚಾಯಿತಿ ಮಾಡಿದರು. ಎಲ್ಲಾರು ಕೂಗಾಡಿದರು. ಅಷ್ಟೇ. ಕೊನೇಗೆ ದೊಡ್ಡಪ್ಪ ಬಾಂಬ್ ಹಾಕಿದರು. ಪಿತ್ರಾರ್ಜಿತ ಆಸ್ತಿ ನನ್ನ ಸಹಿ ಇಲ್ಲದೇ ನೀವು ಮಾರಿದ್ದೀರಿ. ಪಾಲು ಕೊಡಿ ಇಲ್ಲ ಕೋರ್ಟ್‌ಗೆ ಹೋಗ್ತೀನಿ. ಮಿಕ್ಕೋರೆಲ್ಲಾ ಪಾಪ ಸಭ್ಯರು. ಬೆದರಿದ್ರು. ಆ ಕಾಲಕ್ಕೆ ಎಲ್ಲಾ ಸೇರಿ, ಒಂದು ಎರಡೂವರೆ ಸಾವಿರ ಕೊಟ್ಟು ಕೈ ತೊಳಕೊಂಡ್ರಂತೆ. ದೊಡ್ಡಪ್ಪ ಮನೆ ಮಾಡಿದರು. ಸಂಸಾರ ಮಾಡಿದರು. ನಂತರದ ದಿನಗಳಲ್ಲಿ ಎಲ್ಲಾ ಅವತಾರಗಳೂ ಆಯ್ತು. ಮೊದಲಿಗೆ ಬಾಡಿಗೆ ಮನೆ ಬ್ರೋಕರ್ರು. ಆಮೇಲೆ ರಿಯಲ್ ಎಸ್ಟೇಟ್ ಬ್ರೋಕರ್ರು. ಕಿರಾಣಿ ಅಂಗಡಿ. ರೇಷನ್ ಷಾಪು. ಸೀಮೆ ಎಣ್ಣೆ ಲೈಸೆನ್ಸು. ಬಾಳ ಟ್ಯಾಲೆಂಟೆಡ್ ಮನುಷ್ಯ. ಯಾವುದೇ ವಹಿವಾಟಾದ್ರೂ ಕೊಡಿ. ಸಿಕ್ಕಿ ಹಾಕಿಕೊಳ್ಳದ ಹಾಗೆ ಮೋಸ ಮಾಡೋದರಲ್ಲಿ ಪರಿಣಿತಿ ಇತ್ತು. ಇದರೆಲ್ಲದರೊಟ್ಟಿಗೆ ಬಡ್ಡಿ ವ್ಯವಹಾರವೂ ನಡೀತು. ಮಧ್ಯೆ ಒಂದು ಹತ್ತು ವರ್ಷ ಸೌದೆ ಡಿಪೋ ಇಟ್ಟಿದ್ರು. ಆಗಿದ್ದ ಸುದ್ದಿ ಅಂದ್ರೆ. ಇವರು ಕಟ್ಟಿಗೆ ನೆವದಲ್ಲಿ ಶಿವಮೊಗ್ಗೆಯಿಂದ ಗಂಧದ ಸ್ಮಗ್ಲಿಂಗ್ ಮಾಡ್ತಿದ್ರು ಅಂತ. ಎಲ್ಲ ಕಡೆಯೂ ಮೋಸ ಮಾಡ್ತಿದ್ರು. ಎಲ್ಲರೂ ಶಾಪ ಹಾಕ್ತಿದ್ರು. ಆಸು ಪಾಸಿನಲ್ಲಿ ಅವರ ಹೆಸರು ಜನಜನಿತವಾಗಿತ್ತು. ಕೃಷ್ಣ ಐಯ್ಯಂಗಾರ್ರು ಕಣ್ಣೀರು ಹಾಕಿಸದೇ ಇರೋ ಸಂಸಾರವೇ ಇರಲಿಲ್ಲ. ಈ ಗಲಾಟೆಯಲ್ಲಿ ಆಸ್ತೀನೂ ಬೆಳೀತು. ಓಡಿ ಹೋದ ಅಯ್ಯಂಗಾರ್ರು ಅಂತ ಇದ್ದೋರು ಬಡ್ಡಿ ಅಯ್ಯಂಗಾರ್ರು ಅಂತ ಆಗಿ, ಕೊನೇಗೆ ಸಾಹುಕಾರ ಅಯ್ಯಂಗಾರ್ ಅಂತ ಆದರು.

ಹನ್ನೊಂದು ಮಕ್ಕಳು ಒಂದು ಗಂಡು ಎಲ್ಲರಿಗೂ ಒಂದು ತಲೆಮಾರು ತಿನ್ನುವಷ್ಟು ಆಸ್ತಿನೂ ಆಯ್ತು. ಅಜ್ಜಿ ಆಗಾಗ ಅನ್ನೋರು. ಗಂಡ ಹೆಂಡತಿ ಏನಕ್ಕೂ ಕಷ್ಟ ಪಡಲಿಲ್ಲ. ಅವನು ಸೇರು. ಇವಳು ಸವ್ವಾಸೇರು. ಕೋಟ್ಯಾಂತರ ಆಸ್ತಿ ಮಾಡಿದ್ದಾನೆ. ಎಲ್ಲ ಕಂಡೋರಿಂದ ದೋಚಿದ್ದೆ. ಗಂಡ ಹೆಂಡತೀದು ಸ್ವಂತ ಅನ್ನೋದು ಮಕ್ಕಳು ಮಾತ್ರ ನೋಡು. ಹಾಗಂತ ಅನ್ನಿಸತ್ತಪ್ಪ ಅನ್ನೋರು. ಅವರ ಕೊನೇ ಸಾಧನೆ ಚಿಟ್ ಫಂಡು. ಅಷ್ಟು ಹೊತ್ತಿಗೆ ಹೆಸರಾಗಿತ್ತು. ಗಟ್ಟಿ ಕುಳ ಅಂತಾಗಿತ್ತು. ಒಂದು ಚಿಟ್ ಫಂಡ್ ಶುರು ಮಾಡಿದರು. ಮುಂದು ವರೆದು ಒಂದು ಫೈನಾನ್ಸ್ ಕಂಪನಿ ಆಯ್ತು. ನೂರಕ್ಕೆ ತಿಂಗಳಿಗೆ ಐದು ಕೊಡ್ತೀನೀ ಅಂತ ಕೆಲವು ತಿಂಗಳು ಕೊಟ್ರು ಕೂಡ. ಲಕ್ಷಾಂತರ ಮೆಂಬರ್ಸ್ ಆದರು. ಕೋಟ್ಯಾಂತರ ಹಣ ಸೇರ್ತು. ಒಂದು ದಿನ ಇದ್ದಕ್ಕಿದ್ದಹಾಗೆ ಆಫೀಸು ಬಾಗಿಲು ಹಾಕಿ, ದೊಡ್ಡಪ್ಪ ಕಣ್ಮರೆಯಾದರು. ಜನ ಸೇರಿದರು. ಗಲಾಟೆ ಆಯ್ತು. ಮನೆಗೂ ಎಡತಾಕಿದರು. ದೊಡ್ಡಪ್ಪ ನಾಪತ್ತೆ. ದೊಡ್ಡಮ್ಮ ಹೆಣ್ಣು ಮಕ್ಕಳ ಸಮೇತ ಪೊಲೀಸ್ ಸ್ಟೇಷನ್ನಿಗೆ ಹೋಗಿ ಗಂಡ ಮೋಸ ಮಾಡಿದ್ದು, ಅವರ ಹತ್ರ ಜಗಳ ಆಡಿಕೊಳ್ಳಿ, ನನ್ನ ಮನೆ ಹತ್ರ ಗಲಾಟೆ ಯಾಕೆ, ಅಂತ ಬರೆದು ಕೊಟ್ಟು ಪೋಲೀಸಿನವರ ಪ್ರೊಟೆಕ್ಷನ್ ತಗೊಂಡ್ರು. ಆರು ತಿಂಗಳ ಮೇಲೆ ದೊಡ್ಡಪ್ಪ ಪ್ರತ್ಯಕ್ಷ ಆದರು. ಲಾಸ್ ಆಯ್ತು ಅಂದ್ರು. ಆಸ್ತಿನೆಲ್ಲ ಹೆಂಡತಿ ಹೆಸರಿಗೆ ಮಾಡಾಗಿತ್ತು. ಇನ್ಸಾಲ್ವೆನ್ಸಿ ತಗೊಂಡ್ರು. ಕೊನೇಗೆ ಒಂದು ದಿನ ಒಂದು ನೂರು ಜನ ಮನೆ ಹತ್ರ ಸೇರಿ, ದೊಡ್ಡಪ್ಪನಿಗೆ ಚಪ್ಲಿ ಹಾರ ಹಾಕಿ, ಮೆರವಣಿಗೆ ಮಾಡಿದರು. ಪೋಲೀಸಿನವರು ಬಂದು ಬಿಡಿಸಿದರು. ಅಲ್ಲಿಗೆ ಮುಗಿದಿತ್ತು. ದೊಡ್ಡಪ್ಪ ಬಹಳ ದಿನ ಹೇಳೋರು.

'ಮೋಸ ಒಬ್ಬರಿಗೆ ಇಬ್ಬರಿಗೆ ಮಾಡಬಾರದು. ಕೇಸಾಗತ್ತೆ. ಲಕ್ಷಾಂತರ ಜನಕ್ಕೆ ಒಮ್ಮೆಗೆ ಮಾಡಿದರೆ ಸಮಸ್ಯೆ ಕಮ್ಮಿ ನೋಡು. ಅವರು ಸಂಘಟಿತರಾಗಲ್ಲ. ನಾವು ಸೇಫು. ಒಬ್ಬನಿಗೇ ಕೋಟಿ ಮೋಸ ಮಾಡಿದರೆ ಜೈಲಾಗತ್ತೆ. ಕೋಟಿ ಜನಕ್ಕೆ ಒಂದೊಂದು ರೂಪಾಯಿ ಮೋಸ ಮಾಡು, ಕೇಸೇ ಆಗಲ್ಲ.'

'ಚಪ್ಪಲಿ ಹಾರ ಹಾಕಿದ್ರಲ್ಲ ದೊಡ್ಡಪ್ಪ' ಅಂತ ಕೇಳಿದ್ದೆ. ಅದಕ್ಕವರು ಅಂದಿದ್ರು.

'ಹಾಕಲಿ ಬಿಡೋ. ಇನ್ನು ಬದುಕಿರೋವರೆಗೂ ಚಪ್ಪಲಿ ಕೊಳ್ಳೋದೆ ಬೇಕಿಲ್ಲ ಅಲ್ವಾ? ನಾನು ಕೋಟಿಗೆ ನಾಮ ಇಟ್ಟೆ ಅವರು ಚಪ್ಪಲಿ ಹಾರ ಹಾಕಿದ್ರು. ಅಲ್ಲಿಗಲ್ಲೀಗೆ ಆಯ್ತು. ಕೋಟಿ ಉಳೀತಲ್ವಾ?'

'ಮಾನ ಹೋಗ್ಲಿಲ್ವೇ?' ಅಂದೆ.

'ಎಲ್ಲಿ ಹೋಯ್ತು? ಊರ ದೇವಸ್ಥಾನಕ್ಕೆ ಒಂದು ಲಕ್ಷ ಕೊಟ್ಟೆ. ಮೆರವಣಿಗೇಲಿ ಪೂರ್ಣ ಕುಂಭ ಸಮೇತ ಕರ್ಕೊಂಡು ಹೋಗ್ಲಿಲ್ವಾ?'

'ಎಲ್ಲ ಅಕ್ಕಿ ಕಾಳು ಹಾಕಿ' ಯಾರೋ ಅಂದ್ರು.

ನಾನು ಲೋಕದಿಂದ ಆಚೆಗೆ ಬಂದೆ. ಒಂದು ಸುತ್ತು ಹಾಕಿ ಬಾಯಿಗೆ ಅಕ್ಕಿ ಕಾಳು ಹಾಕಿದೆ. ಮನಸ್ಸಿಗೆ ಅನ್ನಿಸಿದ್ದು.

'ಈ ಕೊನೇಗೆ ಇಷ್ಟೊಂದು ಅವತಾರದ ಅವಶ್ಯಕತೆ ಇತ್ತಾ?'

* * *

ಹದಿಮೂರು ದಿನ ಕಾರ್ಯಕ್ರಮಗಳು ಸಾಂಗವಾಗಿ ನಡೀತು. ದೊಡ್ಡಪ್ಪ ಸ್ಪಷ್ಟವಾಗಿ ಬರೆದಿಟ್ಟಿದ್ದರು. ಎಲ್ಲದಕ್ಕೂ ಕಾಸೂ ಇಟ್ಟಿದ್ದರು. ಹಾಗೆ ನೋಡಿದರೆ, ಮಗನಿಗೆ ಬರುವ ಆಸ್ತಿ ಪಾಲು ಹೋಗತ್ತೆ ಅನ್ನೋ ಭಾವವಿತ್ತು. ಅವನಿಗೇನು ಅಷ್ಟು ಖರ್ಚು ಮಾಡೋ ಆಸೆ ಇರಲಿಲ್ಲ ಪಾಪ. ಹನ್ನೊಂದು ಮಕ್ಕಳಲ್ಲಿ ಒಂದೇ ಗಂಡು ಮುದ್ದು ಮುದ್ದಾಗಿ ಸಾಕಿದರು. ಪೆದ್ದುಪೆದ್ದಾಗಿ ಬೆಳೆದಿದ್ದ. ಓದಿರಲಿಲ್ಲ ಕೆಲಸದ ಪ್ರಶ್ನೇನೇ ಇರಲಿಲ್ಲ. ಪೂರ್ತಿ ಜೀವನ ಎಂಟಾಣೆ ದುಡೀಲಿಲ್ಲ. ಅಪ್ಪಾ ಅಮ್ಮ ವಯಸ್ಸಿಗೆ ಬರ್ತಿದ್ದ ಹಾಗೇ ಒಂದು ಮದುವೆ ಅಂತ ಮಾಡಿದ್ದರು. ಕಷ್ಟ ಬಿದ್ದು ಒಂದು ಗಂಡು ಮಗ. ಆ ಮಗನಿಗೇ ಈಗ ಇಪ್ಪತ್ತೈದು ವರ್ಷ. ಬಹಳ ಲೇಟಾಗಿ ಹುಟ್ಟಿದ್ದವನು. ಆದರೆ ಅವನು ಚುರುಕು. ಅಜ್ಜನ್ನೇ ಅಂದ್ರೆ ನನ್ನ ದೊಡ್ಡಪ್ಪನ್ನೇ ಹೊತ್ಕೊಂಡಿದ್ದ. ಒಂದು ಗ್ರಾಜುಯೇಷನ್ ಅಂತ ಮುಗಿಸಿ, ರಿಯಲ್ ಎಸ್ಟೇಟ್ನಲ್ಲಿ ಜೋರಾಗಿದ್ದಾನೆ ಅಂತ ಅಂತಾರಪ್ಪ. ದೊಡ್ಡಪ್ಪ ಬರೆದಿಟ್ಟ ಹಾಗೇ ಎಲ್ಲ ಸೌದೇಲೇ ಸುಟ್ರು. ಎಲೆಕ್ಟ್ರಿಸಿಟಿಗೆ ಕೊಡಲಿಲ್ಲ. ಅರ್ಧ ಗಂಧವೇ ಇತ್ತು. ಕೊನೇಗೆ ಅದು ಬೇಗ ಉರೀಲೀಂತ ಒಂದಿಷ್ಟು ತುಪ್ಪಾನೂ ಸುರಿದರು. ಎಲ್ಲಾ ಪೂರ್ತಿ ದಹಿಸಿ ತಲೆ ಚಿಪ್ಪು ಒಡೆದ ನಂತರವೇ ಅವರ ಮಗ ಸ್ಮಶಾನ ಬಿಟ್ಟದ್ದು.